# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

**ಸ್ಪೇಷಲ್ ಕೇಸ್ ನಂ. 72/2019**

**ದೋ.ಸಾ. : 01 ಫ್ರಾ.ಸಾ. : 01**

| | | |
|---|---|---|
| ಸಾಕ್ಷಿಯ ಹೆಸರು | : | ಮಹಾದೇವ ಶಿವು ಮುಕ್ರಿ |
| ತಂದೆಯ ಹೆಸರು | : | ಶಿವು ಮುಕ್ರಿ |
| ವಯಸ್ಸು | : | 53 ವರ್ಷ |
| ಕೆಲಸ | : | ಚಾಲಕ |
| ವಾಸ | : | ಚಿಟ್ಟೆಕಂಬಿ, ಹೆಗಡೆ, ಕುಮಟಾ |

**ದಿನಾಂಕಃ 24-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-4 ನನ್ನ ಹೆಂಡತಿ, ಚಾಸಾ-5 ನನ್ನ ಮಗ. ನಾವು ಪರಿಶಿಷ್ಟ ಜಾತಿಯ ಹಿಂದೂ ಮುಕ್ರಿ ಜನಾಂಗಕ್ಕೆ ಸೇರಿದವರಾಗಿರುತ್ತೇವೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು, ಅವರು ಪ್ರವರ್ಗ II (ಎ) ರಡಿಯಲ್ಲಿ ಬರುವ ನಾಮಧಾರಿ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ನಾವು ಮುಕ್ರಿ ಜನಾಂಗಕ್ಕೆ ಸೇರಿದವರು ಎಂದು ಆರೋಪಿತರಿಗೆ ತಿಳಿದಿರುತ್ತದೆ.

2. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ, ನಮ್ಮ ಊರಿನ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎದುರುಗಡೆ ಚಾಸಾ-10 ರವರು ಅಂಗಡಿಯನ್ನು ಇಟ್ಟುಕೊಂಡಿದ್ದು, ಅದರಲ್ಲಿ ಅವರು ಅಕ್ರಮವಾಗಿ ಸರಾಯಿ ವ್ಯಾಪಾರ ಮಾಡುತ್ತಿದ್ದರಿಂದ, ಊರಿನ ಜನರು ಹಾಳಾಗುತ್ತಿದ್ದರು, ಆದ ಕಾರಣ, ನಮ್ಮ ಸಮುದಾಯದವರೆಲ್ಲ ಸೇರಿ, ತಹಶೀಲ್ದಾರ ರವರಿಗೆ ದೂರು ನೀಡಿರುತ್ತೇವೆ.

3. ಆ ನಂತರ ದಿಃ 29-05-2019 ರಂದು ರಾತ್ರಿ 08-30 ಗಂಟೆಗೆ ನಾನು ಚಾಸಾ-10 ರವರ ಅಂಗಡಿಗೆ ಸಾಮಾನು ತರಲು ಹೋಗಿದ್ದು, ಆ ಸಮಯದಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು, ಈಗಾಗಲೇ ಮೃತಪಟ್ಟಿರುವ ಕಮಲಾಕರ, ಲಕ್ಷ್ಮೀಶ,

ಪುರಂದರ, ದೀಪಕ್, ದೀಲಿಪ್, ದತ್ತಾತ್ರೇಯ, ಧನರಾಜ್ ರವರು ಚಾಸಾ-10 ರವರ ಅಂಗಡಿಯಲ್ಲಿ ಇದ್ದು, ನಮ್ಮ ಸಮುದಾಯದವರು ಸರಾಯಿ ಮಾರಾಟ ಮಾಡುವುದರ ವಿರುದ್ಧ ದೂರು ನೀಡಿದ್ದ ಕಾರಣ, ಆರೋಪಿತರು ನನಗೆ ಉದ್ದೇಶಿಸಿ "ಬೋಳಿ ಮಗನೆ, ಸೂಳೆ ಮಗನೆ, ನೀನು ಕೀಳು ಜಾತಿಯವನು, ನಿನ್ನನ್ನು ಮುಟ್ಟಿದರೆ ಮೈಲಿಗೆ ಆಗುತ್ತದೆ ಹಾಗೂ ನಾವು ಸ್ನಾನ ಮಾಡಬೇಕು" ಎಂದು ಬೈದು, ನನ್ನ ಮೇಲೆ ಹಲ್ಲೆ ಮಾಡಿದರು. ಆ ನಂತರ ನಾನು ಮನೆಯ ಕಡೆಗೆ ಹೊರಟಾಗ, ಆರೋಪಿತರು ನನಗೆ ಅಡ್ಡಗಟ್ಟಿ ಹೊಡೆದರು, ಆ ಸಮಯದಲ್ಲಿ ನಾನು ನನ್ನ ಹೆಂಡತಿಗೆ ಕರೆ ಮಾಡಿ, ವಿಷಯ ತಿಳಿಸಿದ್ದು, ಆ ಕೂಡಲೇ ನನ್ನ ಹೆಂಡತಿ, ನನ್ನ ಮಗ ಹಾಗೂ ಚಾಸಾ-6 ರಿಂದ 10 ರವರು ಸ್ಥಳಕ್ಕೆ ಬಂದು, ನನ್ನನು ಬಿಡಿಸಲು ಮುಂದಾದಾಗ, ಆರೋಪಿತರು ನನ್ನ ಹೆಂಡತಿಯ ಸೀರೆಯನ್ನು ಹಿಡಿದು ಎಳೆದು, ದೂಡಿ ಹಾಕಿದರು ಹಾಗೂ ನನ್ನ ಮಗನಿಗೆ ಅಂಗಡಿಯ ರೋಲಿಂಗ್ ಶೆಟ್ಟರ್ ಮೇಲೆ ದೂಡಿ ಹಾಕಿದರು. ಅದಲ್ಲದೇ ಚಾಸಾ-8 ರವರಿಗೂ ಸಹ ಆರೋಪಿತರು ದೂಡಿ ಹಾಕಿದರು. ಆ ನಂತರ ಆರೋಪಿತರೆಲ್ಲರೂ ನನಗೆ, ನನ್ನ ಮಗ ಮತ್ತು ಹೆಂಡತಿಗೆ ಅಂಗಡಿಯ ಎದುರು ಇರುವ ರಸ್ತೆಯ ಮೇಲೆ ಹಲ್ಲೆ ಮಾಡಿದರು. ಆರೋಪಿತರು ಹಲ್ಲೆ ಮಾಡಿದ ನಂತರ ನಾವು ಕುಮಟಾ ಸರಕಾರಿ ಆಸ್ಪತ್ರೆಗೆ ಹೋಗಿ, ನನ್ನ ಮಗನಿಗೆ ಚಿಕಿತ್ಸೆಯನ್ನು ಕೊಡಿಸಿರುತ್ತೇವೆ.

4. ಘಟನೆ ನಡೆದ ನಂತರ ನಾವು ನಮ್ಮ ಸಮಾಜದ ಹಿರಿಯರಲ್ಲಿ ಚರ್ಚಿಸಿ, 4-5 ದಿನಗಳ ನಂತರ ಅಂದರೆ ದಿಃ 03-06-2019 ರಂದು ಪೊಲೀಸ್ ಠಾಣೆಗೆ ಹೋಗಿ, ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತೇವೆ . ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ನಾನು, ನನ್ನ ಮಗ ಹಾಗೂ ನನ್ನ ಹೆಂಡತಿ ಪುನಃ ಕುಮಟಾ ಸರಕಾರಿ ಆಸ್ಪತ್ರೆಗೆ ಹೋಗಿ, ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ.

5. ದೂರು ನೀಡಿದ ಮರುದಿನ ಅಂದರೆ ದಿಃ 04-06-2019 ರಂದು ಪೊಲೀಸರು ಪಂಚನಾಮೆ ಮಾಡಲು ಚಾಸಾ-2 ಮತ್ತು 3 ರವರೊಂದಿಗೆ ಚಾಸಾ-10 ರವರ ಅಂಗಡಿಯ ಬಳಿ ಬಂದಿದ್ದು, ನಾನು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಆಗ ಪೊಲೀಸರು ಘಟನಾ ಸ್ಥಳವನ್ನು ಪರಿಶೀಲಿಸಿ, ಸ್ಥಳದಲ್ಲಿಯೇ ಸಂಜೆ 04-00 ರಿಂದ 05-15 ಗಂಟೆಯ ವರೆಗೆ ಪಂಚನಾಮೆ ಮಾಡಿ, ನಕಾಶೆಯನ್ನು ತಯಾರಿಸಿ, ಫೋಟೋಗಳನ್ನು ತೆಗೆದು, ನನ್ನ

ಸಹಿಯನ್ನು ಪಡೆದುಕೊಂಡಿರುತ್ತಾರೆ. ಪಂಚನಾಮೆ ಹಾಗೂ ನಕಾಶೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಎಂದು, ನಕಾಶೆಯನ್ನು ನಿಪಿ-3 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಒಟ್ಟು 4 ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-4 ರಿಂದ ನಿಪಿ-7 ಎಂದು ಗುರುತಿಸಲಾಯಿತು.

6. ಅದಾದ ನಂತರ ನಾನು ಕುಮಟಾ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿ, ಸಹಿ ಮಾಡಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು 8(ಬಿ) ಎಂದು ಗುರುತಿಸಲಾಯಿತು. ಆ ನಂತರ ನಾನು ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆಯನ್ನು ನೀಡಿಲ್ಲ. ನಾನು ನೀಡಿದ ನಿಪಿ-1 ದೂರಿನಲ್ಲಿ ನನ್ನ ಮೇಲೆ ಹಲ್ಲೆ ಮಾಡಿದ ಆರೋಪಿತರ ಹೆಸರು ಮತ್ತು ವಿಳಾಸವನ್ನು ನಮೂದಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ